# ಪುರುಷರಲ್ಲಿ ಬಂಜೆತನದ ಸಮಸ್ಯೆ



ಕೆಲವು ವರ್ಷಗಳ ಹಿಂದಿನ ತನಕ ದಂಪತಿಗಳಿಗೆ ಮಕ್ಕಳಾಗದೇ ಇರುವುದಕ್ಕೆ ಮಹಿಳೆಯರನ್ನಷ್ಟೇ ಹೊಣೆ ಮಾಡಲಾಗುತ್ತಿತ್ತು. ಯಾವುದೇ ಪರೀಕ್ಷೆಗಳಿಗೆ ಆಕೆಯಷ್ಟೇ ಒಳಗಾಗಬೇಕಿತ್ತು. 'ವೈದ್ಯರು ನಿನ್ನ ಗಂಡನನ್ನೂ ಕರೆದುಕೊಂಡು ಬಾರಮ್ಮ' ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಒಲ್ಲದ ಮನಸ್ಸಿನಿಂದ ಪುರುಷರು ಬಂದು ತಪಾಸಣೆಗೆ ಒಳಗಾಗುತ್ತಿದ್ದರು. ಆಗ ಅವನಲ್ಲಿ ಯಾವುದೇ ವೀರ್ಯಾಣು ಇಲ್ಲದೆ ಇರುವುದು ಪತ್ತೆಯಾಗುತ್ತಿತ್ತು.

**ಬದಲಾದ ಟ್ರೆಂಡ್**

ಈಗ ದಂಪತಿಗಳ ಮನೋಭಾವ ಬದಲಾಗಿದೆ. ಮದುವೆಯಾಗಿ ವರ್ಷ ಆಗುತ್ತಿದ್ದಂತೆ, ಮಗು ಆಗುವ ಲಕ್ಷಣಗಳು ಕಂಡುಬರದೇ ಇದ್ದರೆ ಗಂಡ–ಹೆಂಡತಿ ಇಬ್ಬರೂ ಬಂದು ವೈದ್ಯರನ್ನು ಕಾಣುತ್ತಾರೆ. ವೈದ್ಯರು ಸೂಚಿಸುವ ಎಲ್ಲ ಪರೀಕ್ಷೆಗಳಿಗೂ ಒಪ್ಪಿಗೆ ಸೂಚಿಸುತ್ತಾರೆ. ಹೀಗಾಗಿ ಸಕಾಲಕ್ಕೆ ಅವರ ಬಂಜೆತನದ ಸಮಸ್ಯೆ ನಿವಾರಣೆ ಮಾಡಲು ಸಾಧ್ಯವಾಗುತ್ತದೆ.

ಹೆಚ್ಚುತ್ತಿರುವ ಸಮಸ್ಯೆ: ಮುಂಚೆ ಮಹಿಳೆಯರಲ್ಲಿ ಬಂಜೆತನದ ಸಮಸ್ಯೆ ಶೇ. 60ರವರೆಗೆ ಇರುತ್ತಿತ್ತು. ಈಗ ಪುರುಷರಲ್ಲಿ ಅದು ಶೇ 50ನ್ನು ಮೀರಿದೆ.

**ಪುರುಷರ ಸಂತಾನ ಹೀನತೆಗೆ ಕಾರಣ?**

- ದುಗುಡ ಮತ್ತು ಒತ್ತಡ ಆವರಿಸಿಕೊಳ್ಳುತ್ತಿರುವುದು.
- ಕೆಲಸ ಅವಧಿಯಲ್ಲಿ ಬದಲಾವಣೆ, ರಾತ್ರಿ ಕೆಲಸ, ಹಗಲು ನಿದ್ರೆಯಿಂದಾಗಿ ಗಂಡ–ಹೆಂಡತಿಗೆ ಸಮರ್ಪಕ ಸಮಾಗಮ ಏರ್ಪಡದೇ ಇರುವುದು.
- ಒಂದೇ ಕಡೆ ಕುಳಿತು ಕೆಲಸ ನಿರ್ವಹಣೆ. ವ್ಯಾಯಾಮದ ಕೊರತೆ.
- ಮೊಬೈಲ್, ಲ್ಯಾಪ್‌ಟಾಪ್ ಮುಂತಾದ ಉಪಕರಣಗಳ ಅತಿಯಾದ ಬಳಕೆ.
- ಹೆಚ್ಚು ಬಿಸಿಯಿರುವ ಜಾಗದಲ್ಲಿ ಕೆಲಸ ಮಾಡುವುದು.
- ಅತಿಯಾದ ಧೂಮಪಾನ, ಮದ್ಯಪಾನ ಸಂತಾನಹೀನತೆಗೆ ಕಾರಣವಾಗಬಹುದು.
- ಕ್ಯಾನ್ಸರ್‌ಗೆ ರೇಡಿಯೋ ಥೆರಪಿ, ಕೀಮೋಥೆರಪಿ ಪಡೆಯುತ್ತಿರುವವರಲ್ಲೂ ಈ ಸಮಸ್ಯೆ ಉಂಟಾಗಬಹುದು.
- ಬಿಗಿಯಾದ ಜೀನ್ಸ್ ಹಾಗೂ ಒಳ ಉಡುಪು ಧರಿಸುವುದು.

**ವೀರ್ಯಾಣುಗಳ ಸಂಖ್ಯೆ ಎಷ್ಟಿರಬೇಕು?**

ಪುರುಷನ ಒಂದು ಎಂ.ಎಲ್. ವೀರ್ಯದಲ್ಲಿ 15 ಮಿಲಿಯನ್ ವೀರ್ಯಾಣುಗಳಿರಬೇಕು. ಆಗಲೇ ಫಲಪ್ರದ ಸಂತಾನ ಸಾಧ್ಯ. ಆ ಸಂಖ್ಯೆ 10 ಮಿಲಿಯನ್‌ಗಿಂತ ಕಡಿಮೆ ಇದ್ದರೆ ಅವನಲ್ಲಿ ತೊಂದರೆ ಇದೆ ಎಂದರ್ಥ. 5 ಮಿಲಿಯನ್‌ಗಿಂತಲೂ ಕಡಿಮೆ ಸಂಖ್ಯೆ ವೀರ್ಯಾಣು ಇದೆಯೆಂದಾದರೆ, ಅವನಿಗೆ ಗಂಭೀರ ತೊಂದರೆ ಇದೆ ಎನ್ನುವುದು ಸ್ಪಷ್ಟವಾಗುತ್ತದೆ. ವೀರ್ಯಾಣುಗಳೇ ಇಲ್ಲದಿದ್ದಲ್ಲಿ ಮಗು ಆಗುವ ಸಾಧ್ಯತೆಯೇ ಇಲ್ಲ ಎಂದೇ ಅರ್ಥ

**ವೀರ್ಯಾಣು ಕೊರತೆಗೆ ಕಾರಣ:**

ಕೆಲವು ಸಾಮಾನ್ಯ ಕಾರಣಗಳ ಜೊತೆಗೆ ಪುರುಷರ ಟೆಸ್ಟೀಸ್ ಹಾಗೂ ಎಪಿಡೈಡೆಮಿಸ್ ಅಥವಾ ಅದಕ್ಕೆ ಸಂಬಂಧಪಟ್ಟ ರಕ್ತನಾಳಗಳು ಅತಿಯಾಗಿ ಉಬ್ಬಿರುವುದು ಸಮಾಗಮಕ್ಕೆ ತೊಂದರೆಯಾಗಿ ಪರಿಣಮಿಸಬಹುದು. ಒಂದು ಸಣ್ಣ ಶಸ್ತ್ರಚಿಕಿತ್ಸೆಯಿಂದ ಅಲ್ಲಿನ ರಕ್ತನಾಳಗಳನ್ನು ಸರಿಪಡಿಸಿದರೆ ಪುರುಷ ಮತ್ತೆ ಎಂದಿನಂತೆ ಕಾರ್ಯಪ್ರವೃತ್ತನಾಗಬಹುದು. ಇದರಿಂದಲೂ ಯಾವುದೇ ಫಲಿತಾಂಶ ದೊರೆಯದಿದ್ದರೆ ದಾನಿಯ ವೀರ್ಯ ಪಡೆದು ಕೃತಕ ಗರ್ಭಧಾರಣೆ ವಿಧಾನ ಅನುಸರಿಸಬಹುದು.

**ಸೆಕೆಂಡರಿ ಫರ್ಟಿಲಿಟಿ:**

ಮೊದಲ ಮಗು ಯಾವುದೇ ತೊಂದರೆ ಇಲ್ಲದೆ ಆಗಿರುತ್ತದೆ. ಮಗುವಿನ ಒತ್ತಡಕ್ಕೋ ಅಥವಾ ದಂಪತಿಗಳು ಅಪೇಕ್ಷೆ ಪಟ್ಟೋ ಇನ್ನೊಂದು ಮಗುವಿಗಾಗಿ ಪ್ರಯತ್ನಿಸುತ್ತಾರೆ. ಆದರೆ ಗರ್ಭಧಾರಣೆ ಆಗುವುದಿಲ್ಲ. ಜೀವನಶೈಲಿಯಲ್ಲಿ ಏರುಪೇರು, ರೋಗಗಳ ಕಾರಣದಿಂದ ಈ ಸ್ಥಿತಿ ಉದ್ಭವಿಸುತ್ತದೆ. ಅವರ ಸಮಸ್ಯೆ ನಿವಾರಣೆ ಮಾಡಿ ಗರ್ಭಧಾರಣೆ ಆಗುವಂತೆ ಮಾಡಬಹುದು.

**ಸಹಜ ಸಂತಾನೋತ್ಪತ್ತಿಗೆ.**

- ಜೀವನಶೈಲಿ ಬದಲಾವಣೆ ಮಾಡಿಕೊಳ್ಳಿ ದಿನವೂ ಮುಂಜಾನೆ, ಸಂಜೆ ಸ್ವಲ್ಪ ಹೊತ್ತು ವಾಕಿಂಗ್ ಮಾಡಿ.
- ದಿನವೂ ಸರಿಯಾದ ಸಮಯಕ್ಕೆ ಊಟ, ತಿಂಡಿ ಮಾಡಿ, ಹಸಿರು ತರಕಾರಿಗಳು, ಸೊಪ್ಪುಗಳು, ಹಣ್ಣುಗಳು, ಅದರಲ್ಲಿರಲಿ.
- ಸದಾ ಒಂದೇ ಕಡೆ ಕುಳಿತು ಕೆಲಸ ಮಾಡುತ್ತಿರಬೇಡಿ. ಆಗಾಗ 5 ನಿಮಿಷ ಎದ್ದು ಸುತ್ತಾಡಿ.
- ಬಿಗಿ ಬಟ್ಟೆಗಳನ್ನು ಧರಿಸಬೇಡಿ.
- ಬಿ.ಪಿ., ಮಧುಮೇಹ ನಿಯಂತ್ರಣದಲ್ಲಿಟ್ಟುಕೊಳ್ಳಿ.

**ಬದಲಾದ ಪುರುಷರ ಮನಸ್ಥಿತಿ:** ಕೆಲವು ರೋಗಗಳ ಕಾರಣಗಳಿಂದಾಗಿ ಪುರುಷರು ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗುತ್ತದೆ. ಶಸ್ತ್ರಚಿಕಿತ್ಸೆಯ ಬಳಿಕ ತಾವು ಎಲ್ಲಿ ತಂದೆಯಾಗಲು ಸಾಧ್ಯವಾಗುವುದಿಲ್ಲವೋ ಎಂದು ಕೆಲವು ಪುರುಷರಿಗೆ ಆತಂಕ ಇರುತ್ತದೆ., ಅಂತಹವರಿಗೆ ವೈದ್ಯರು ಮೊದಲೇ ವೀರ್ಯವನ್ನು ಫ್ರೀಜ್ ಮಾಡಲು ಸೂಚಿಸುತ್ತಾರೆ. ಒಬ್ಬ ವ್ಯಕ್ತಿಯ 5–6 ಮಾದರಿ ವೀರ್ಯ ಪಡೆದು ಅದನ್ನು ಸುರಕ್ಷಿತವಾಗಿ ಇಡಲಾಗುತ್ತದೆ. ಶಸ್ತ್ರಚಿಕಿತ್ಸೆ ಮುಗಿದ ಬಳಿಕ ಆ ವ್ಯಕ್ತಿ ಫ್ರೀಜ್ ಮಾಡಿದ ತನ್ನದೇ ವೀರ್ಯದಿಂದ ಕೃತಕ ಗರ್ಭಧಾರಣೆ ಮೂಲಕ ತನಗೆ ಬೇಕಾದಾಗ ಮಗು ಪಡೆಯಬಹುದಾಗಿದೆ.

**ಮದುವೆಗೂ ಮುಂಚೆ ವೀರ್ಯ ಪರೀಕ್ಷೆ.**

ಸಾಫ್ಟ್‌ವೇರ್‌ನಲ್ಲಿ ಕೆಲಸ ಮಾಡುವ ಕೆಲವು ಪುರುಷರು ಮದುವೆಗೂ ಮುಂಚೆಯೇ ವೀರ್ಯ ಪರೀಕ್ಷೆ ಮಾಡಿಸಿಕೊಂಡು ತಾವು ತಂದೆಯಾಗುವ ಅರ್ಹತೆ ಪಡೆದಿದ್ದೇವೂ ಇಲ್ಲವೂ ಎಂದು ಖಚಿತಪಡಿಸಿಕೊಳ್ಳುತ್ತಾರೆ. ಒಂದು ವೇಳೆ ಏನಾದರೂ ಸಮಸ್ಯೆ ಇರುವುದು ಕಂಡುಬಂದಲ್ಲಿ, ಮೊದಲೇ ಚಿಕಿತ್ಸೆ ಪಡೆಯುತ್ತಾರೆ. ಬಳಿಕವೇ ಮದುವೆಯಾಗಿ ತಮ್ಮದೇ ಆದ ಪುಟ್ಟ ಸಂಸಾರದೊಂದಿಗೆ ಖುಷಿಯಿಂದ ಕಾಲಕಳೆಯುತ್ತಾರೆ.

**ವೀರ್ಯಾಣು ಇಲ್ಲದಿದ್ದರೂ...:**

ಕೆಲವು ಪುರುಷರಲ್ಲಿ ವೀರ್ಯಾಣುಗಳು ಇರುವುದೇ ಇಲ್ಲ. ಅಂಥವರಿಗೆ ಯಾವ ಸಮಸ್ಯೆಯಿದೆ ಎನ್ನುವುದನ್ನು ಖಚಿತಪಡಿಸಿಕೊಂಡು ಹೊಸ ತಂತ್ರಜ್ಞಾನದ ಮುಖಾಂತರ ಟೆಸ್ಟೀಸ್ ಹಾಗೂ ಎಪಿಡೈಡೆಮಿಸ್‌ನಿಂದ ನೇರವಾಗಿ ವೀರ್ಯಾಣು ಪಡೆದು ಅಂಡಾಣುವಿನ ಜೊತೆ ಮಿಲನಗೊಳಿಸಿ ಕೃತಕ ಗರ್ಭಧಾರಣೆ ಮಾಡುವುದು ಸಾಧ್ಯವಿದೆ.

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**

ಗರ್ಭಗುಡಿ
GarbhaGudi

**GARBHAGUDI IVF CENTRE**

MAIN & REG. OFFICE:
210/A, 14th Main, 50ft Road,
Hanumanthanagar, Bangalore-50.
**Mob: +91 988691556**

**Branches at:**
HRBR Layout- M:8861433339
Electronic City- M: 8861811116
South End Circle- M: 9972473555

**E-mail: info@garbhagudi.com**
**Web: www.garbhagudi.com**
**Tollfree: 1800-200-8288**